ಅ) ಇದಕ್ಕೆ ಬೇಕಾಗುವ ಕಾಲಾವಧಿ ಎಷ್ಟು?

ಇ) ಕಳೆದ ಸಾಲಿನ ಹೆಚ್ಚುವರಿ ಪಟ್ಟಿಯಿಂದ ಖಾಲಿ ಇರುವ ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಆಲೋಚಿಸಿದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು)

ಅ) ಅ) ಪ್ರಸ್ತುತ ಖಾಲಿ ಇರುವ ಹುದ್ದೆಗಳ ವಿವರಗಳೆಂದರೆ:

1)	ಪಿ.ಎಸ್.ಐ. (ಸಿವಿಲ್)	-	359
2)	ಪಿ.ಎಸ್.ಐ. (ಬೆ.ಮು.ಸಂ.)	-	72
3)	ಪಿ.ಎಸ್.ಐ. (ನಿಸ್ತಂತು)	-	26
4)	ಆರ್.ಎಸ್.ಐ. (ಸಿಎಆರ್ : ಡಿಎಆರ್)	-	78
5)	ವಿಶೇಷ ಆರ್.ಎಸ್.ಐ. (ಕರ್ನಾಟಕ ರಾಜ್ಯ ಮೀಸಲು ಪೋಲೀಸ್)	-	53
		ಒಟ್ಟು	608

ಇ) ಒಟ್ಟು 263 ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆ ಬಂದಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿ ಭರ್ತಿ ಮಾಡಿಕೊಳ್ಳಲು ಬಂದಿರುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ಕೊಲೆಗಳು.

954(1041) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಿವಮೊಗ್ಗ ಜಿಲ್ಲೆಯ ಹೊಸ ಜಿಲ್ಲಾ ರಕ್ಷಣಾಧಿಕಾರಿಗಳು ಅಧಿಕಾರ ವಹಿಸಿಕೊಂಡ ನಂತರ ಜಿಲ್ಲೆಯಲ್ಲಿ ಎಷ್ಟು ಕೊಲೆಗಳು ನಡೆದಿದೆ?

ಆ) ಇದರಲ್ಲಿ ಬಂಧಿಸಲಾದ ಆಪರಾಧಿಗಳ ಸಂಖ್ಯೆ ಎಷ್ಟು?

ಇ) ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಈ) ಮಟ್ಕಾ ಹಾಗೂ ಜೂಜು ಇತರೇ ಅವ್ಯವಹಾರಗಳನ್ನು ಕಡಿಮೆಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :—

ಅ) ಶಿವಮೊಗ್ಗ ಜಿಲ್ಲೆಯ ಹೊಸ ಜಿಲ್ಲಾ ರಕ್ಷಣಾಧಿಕಾರಿಗಳು ಅಧಿಕಾರ ವಹಿಸಿಕೊಂಡ ನಂತರ (ಅಂದರೆ ದಿನಾಂಕ : 9-7-98 ರಿಂದ 18-3-99 ರವರೆಗೆ 37 ಕೊಲೆ ಪ್ರಕರಣಗಳು ವರದಿಯಾಗಿರುತ್ತದೆ.

ಆ) ವರದಿಯಾಗಿರುವ 37 ಪ್ರಕರಣಗಳಲ್ಲಿ 34 ಪ್ರಕರಣಗಳು ಪತ್ತೆಯಾಗಿದ್ದು ಒಟ್ಟು 101 ಜನ ಆರೋಪಿಗಳನ್ನು ಬಂಧಿಸಲಾಗಿದೆ.

ಇ) ಸಾಮಾನ್ಯವಾಗಿ ಕೊಲೆಯ ಪ್ರಕರಣಗಳನ್ನು ತಡೆಗಟ್ಟಲು ಸಾಧ್ಯವಿಲ್ಲ. ಆದರೂ ಜಮೀನು ವ್ಯಾಜ್ಯ, ಹಳ್ಳಿಗಳಲ್ಲಿ ಗುಂಪುಗಾರಿಕೆ ಇಂಥಹ ಸಂದರ್ಭಗಳಲ್ಲಿ ಪ್ರತಿಬಂಧಿತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಬಾರ್ ಮತ್ತು ರೆಸ್ಟೋರೆಂಟ್, ಮದ್ಯದಂಗಡಿಗಳು ಇಂಥವುಗಳ ಮೇಲೆ ಗಮನವಿರಿಸಿದ್ದು ಯಾವುದೇ ಗಲಭೆಯಾದಾಗ ತುರ್ತು ಕ್ರಮ ಕೈಗೊಳ್ಳಲಾಗುತ್ತಿದೆ. ಯಾವುದೇ ಗಲಭೆ ದೊಂಬಿ ಮುಂತಾದವುಗಳಲ್ಲಿ ತೀವ್ರ ಕ್ರಮ ಜರುಗಿಸಿ ಆರೋಪಿಗಳನ್ನು ಬಂಧಿಸಿ ಮುಂದೆ ಇವು ಬೆಳೆದು ದೊಡ್ಡದಾಗದಂತೆ ಹತ್ತಿಕ್ಕಲಾಗುತ್ತಿದೆ.

ಈ) ಶಿವಮೊಗ್ಗ ಜಿಲ್ಲೆಯಲ್ಲಿ ಮಟ್ಕಾ ಜೂಜಾಟ ಹಾಗೂ ಇತರ ಅವ್ಯವಹಾರಗಳನ್ನು ನಿಯಂತ್ರಣಗೊಳಿಸಲು ಅಪರಾಧ ಜಾಗ್ರತಾ ದಳವನ್ನು ರಚಿಸಿದೆ. ಅವು ಇಂತಹ ಸ್ಥಳಗಳ ಮೇಲೆ ದಾಳಿ ನಡೆಸಿ ಕ್ರಮ ಜರುಗಿಸುತ್ತವೆ.

ನೂತನವಾಗಿ ಜಿಲ್ಲಾ ರಕ್ಷಣಾಧಿಕಾರಿಗಳು ಜಿಲ್ಲೆಯ ಪ್ರಭಾರ ವಹಿಸಿಕೊಂಡ ನಂತರ ಅಂದರೆ 9-7-98 ರಿಂದ 18-3-98 ರ ವರೆಗೆ ಒಟ್ಟು 85 ಮಟ್ಕಾ ಜೂಜಾಟದ ಕೇಂದ್ರಗಳ ಮೇಲೆ ದಾಳಿ ನಡೆಸಲಾಗಿದೆ. 43 ಇತರೆ ಜೂಜಾಟದ ಕೇಂದ್ರಗಳ ಮೇಲೆ ದಾಳಿ ನಡೆಸಲಾಗಿದೆ. ಮದ್ಯವನ್ನು ಅಕ್ರಮವಾಗಿ ಸಂಗ್ರಹಿಸಿದ 60 ಸ್ಥಳಗಳ ಮೇಲೆ ದಾಳಿ ನಡೆಸಲಾಗಿದೆ. ಹಾಗೂ ಸೂಳೆಗಾರಿಕೆಯನ್ನು ನಡೆಸುತ್ತಿದ್ದ 13 ಕೇಂದ್ರಗಳ ಮೇಲೆ ದಾಳಿ ನಡೆಸಿ ಕ್ರಮ ಕೈಗೊಳ್ಳಲಾಗಿದೆ.

ದಿನಗೂಲಿ ನೌಕರರು.

956(1035) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯ ಸರಕಾರದ ದಿನಗೂಲಿ ನೌಕರರ ಮಹಾಮಂಡಳಿಯು ಗೌರವಧನ ಹಾಗೂ ದಿನಗೂಲಿ ನೌಕರರ ಬೇಡಿಕೆಗಳ ಈಡೇರಿಕೆಗಾಗಿ ದಿನಾಂಕ :22-3-99 ರಿಂದ ಅನಿರ್ದಿಷ್ಟ ಅವಧಿಯ ವಿಧಾನಸೌಧ ಮುತ್ತಿಗೆ ಕರೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;